ಓ.ಎಸ್. ನಂ. 117/2023
ಪಿ ಡಬ್ಲ್ಯೂ: 01 (Neelamma)

ದಿನಾಂಕ: 10.07.2025 ರಂದು ಮುಂದುವರೆದ ಮುಖ್ಯ ವಿಚಾರಣೆಗೆ ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆ: ವಾದಿ ಪರ – ಶ್ರೀ NMS ವಕೀಲರಿಂದ.

ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿದ ದಾಖಲೆಗಳ ವಿವರ ಈ ಕೆಳಗಿನಂತಿವೆ:

1. ಸರ್ವೆ ನಂಬರ್ 84/1 ಬಿ/9 ರ 6 ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿಪಿ 01 ಎಂದು ಗುರುತಿಸಲಾಯಿತು.
2. ದಾವಾ ಸ್ವತ್ತಿಗೆ ಸಂಬಂಧಪಟ್ಟ 2 ಮ್ಯುಟೇಶನ್ ಪ್ರತಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿಪಿ 02 ಎಂದು ಗುರುತಿಸಲಾಯಿತು.
3. ದಿ: 08.02.2010 ರ ಕ್ರಯ ಪತ್ರವನ್ನು ಹಾಜರು ಪಡಿಸಿದ್ದು ಅದನ್ನು ನಿಪಿ 03 ಎಂದು ಗುರುತಿಸಲಾಯಿತು.
4. ದಾವಾ ಸ್ವತ್ತಿಗೆ ಸಂಬಂಧಪಟ್ಟ ಆಕಾರ ಬಂದ್‌ನ ಯಥಾ ನಕಲು ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ 04 ಎಂದು ಗುರುತಿಸಲಾಯಿತು.
5. ದಾವಾ ಸ್ವತ್ತಿಗೆ ಸಂಬಂಧಪಟ್ಟ 2 ಕಚ್ಚಾ ನಕಾಶೆಯ ಯಥಾ ನಕಲು ಪ್ರತಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿಪಿ 05 ಎಂದು ಗುರುತಿಸಲಾಯಿತು.
6. ಸರ್ವೆ ನಂಬರ್ 84/1 ಬಿ/1 ರ 4 ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿಪಿ 06 ಎಂದು ಗುರುತಿಸಲಾಯಿತು.
7. ಕರ್ನಾಟಕ ಗ್ರಾಮೀಣ ಬ್ಯಾಂಕಿನವರು ಬೆಳೆ ಸಾಲ ಇರುವ ಬಗ್ಗೆ ನೀಡಿದ ದೃಢೀಕರಣ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ 07 ಎಂದು ಗುರುತಿಸಲಾಯಿತು.
8. ನಮೂನೆ-15 ನ್ನು ಹಾಜರುಪಡಿಸಿದ್ದು ಅದನ್ನು ನಿಪಿ 08 ಎಂದು ಗುರುತಿಸಲಾಯಿತು.

ವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಸಾಕ್ಷಿಯ ಮುಂದಿನ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,
ಕೂಡ್ಲಿಗಿ.